**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 09.06.2021.

**1] ತಿಕೋಟಾ ಪೊಲೀಸ ಠಾಣೆ ಗುನ್ನೆ ನಂ: 85/2021 ಕಲಂ: 32(3) ಕರ್ನಾಟಕ ಅಬಕಾರಿ ಕಾಯ್ದೆ. ಹಾಗೂ ಕಲಂ 188,269,271 ಐಪಿಸಿ**

**ದಿನಾಂಕ:** 08.06.2021 ರಂದು 12:50 ಘಂಟೆಗೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಪಿಂಟು ತಂದೆ ವಿಠ್ಠಲ ರಾಠೋಡ ಸಾ-ಸೋಮದೇವರ ಹಟ್ಟಿ ಎಲ್.ಟಿ.ನಂ-03 ಈತನು ಕೊವಿಡ -19 ರೋಗದ ಹರಡುವಿಕೆ ನಿಯಂತ್ರಿಸುವ ಸಲುವಾಗಿ ಸರ್ಕಾರವು ವಿಧಿಸಿರುವ ನಿಯಮಾವಳಿಗಳನ್ನು ಉಲ್ಲಂಘಿಸಿ ಸಾಂಕ್ರಾಮಿಕ ರೋಗವು ಹರಡದಂತೆ ಕೈಕೊಂಡ ಕ್ರಮಗಳ ವಿರುದ್ದವಾಗಿ ಸಾರ್ವಜನಿಕ ಪ್ರಾಣಕ್ಕೆ ಉದ್ದೇಶಪೂರ್ವಕವಾಗಿ ಸೋಂಕನ್ನು ಹರಡುವ ಸಂಭವ ಇದೆ ಎಂದು ಗೊತ್ತಿದ್ದರೂ ಕೂಡಾ ಸದರಿ ಆರೋಪಿ ಉದ್ದೇಶ ಪೂರ್ವಕವಾಗಿ ಒಂದು ಕಡೆ ಗುಂಪು ಕೂಡಿ ಕುಳಿತು ಮತ್ತು ತಿರುಗಾಡಿ ಸಾಂಕ್ರಾಮಿಕ ರೋಗ ಹರಡಲು ಕಾರಣಿಭೂತರಾಗಿ ಸಾರ್ವಜನಿಕರ ಜೀವಕ್ಕೆ ರೋಗ ಹರಡುವ ಸಾಧ್ಯತೆ ಇದ್ದದ್ದು ಗೊತ್ತಿದ್ದರೂ ಕೂಡಾ ಸರಕಾರದಿಂದಾಗಲಿ ವ ಸಂಭಂದಪಟ್ಟ ಯಾವುದೇ ಪ್ರಾಧಿಕಾರದಿಂದ ಪರವಾನಿಗೆ ವ ಪರ್ಮಿಟ್ ಇಲ್ಲದೇ ಅನಧಿಕೃತವಾಗಿ ತನ್ನ ಸ್ವಂತ ಲಾಭಕ್ಕಾಗಿ ಅಕ್ರಮವಾಗಿ ತನ್ನ ಮನೆಯಲ್ಲಿ ಸಾರ್ವಜನಿಕರಿಗೆ ಗ್ಲಾಸಿನಲ್ಲಿ ಶೆರೆಯನ್ನು ಕುಡಿಯಲು ಅವಕಾಶ ಮಾಡುವಾಗ ಸಿಕ್ಕಿರುತ್ತಾನೆ. ಈ ಬಗ್ಗೆ ಎ.ಎಮ್.ಮುಶಾಪುರಿ ಪಿ.ಎಸ್.ಐ (ಕಾ.ಸು) ತಿಕೋಟಾ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.06.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ತಾಳಿಕೋಟ ಪೊಲೀಸ ಠಾಣೆ ಗುನ್ನಾ. ನಂ: 103/2021 ಕಲಂ: ಕಲಂ: 78 ಕೆಪಿ ಯ್ಯಾಕ್ಟ ಮತ್ತು ಕಲಂ: 188, 269 ಐ.ಪಿ.ಸಿ**

ದಿನಾಂಕ: 08.06.2021 ರಂದು 17:20 ಗಂಟೆಗೆ ಗಂಟೆಗೆ. ಸುಮಾರಿಗೆ ಇದರಲ್ಲಿ ಆರೋಪಿತರಾದ ಹಣಮಂತ ತಂದೆ ಬಸಪ್ಪ ದೊಡಮನಿ ವಯಾ: 22 ವರ್ಷ ಸಾ॥ ಕೊಡೆಕಲ್ ತಾ॥ ಸುರಪುರ ಜಿ॥ ಯಾದಗಿರಿ, ಆರೋಪಿತನು ತನ್ನ ಪಾಯ್ದೇಗೋಸ್ಕರ ಕಾನೂನು ಬಾಹಿರವಾಗಿ ಒಂದು ರೂಪಾಯಿಗೆ 80=00 ರೂಪಾಯಿ ಕೊಡುವ ಕರಾರಿನ ಮೇಲೆ ಓ.ಸಿ ಎಂಬುವ ಜೂಜಾಟದಲ್ಲಿ ತೊಡಗಿದ್ದು ಅಲ್ಲದೇ ಮಾನ್ಯ ರಾಜ್ಯ ಸರ್ಕಾರ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಿಜಯಪೂರ ರವರು ಕೋರೋನಾ ವೈರಸ್/ಕೊವಿಡ್ -19 ಸಾಂಕ್ರಾಮಿಕ ರೋಗ ಸಾರ್ವಜನಿಕರಿಗೆ ಹರಡದಂತೆ ಮುಂಜಾಗ್ರತಾ ಕ್ರಮವಾಗಿ ಹೊರಡಿಸಿದ ಆದೇಶವನ್ನು ಉಲ್ಲಂಘನೆ ಮಾಡಿ ಮತ್ತು ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಸಾಂಕ್ರಾಮಿಕ ರೋಗ ನಿರ್ವಹಣಾ ಕಾಯ್ದೆಯ ಆದೇಶವನ್ನು ಉಲ್ಲಂಘನೆ ಮಾಡಿದ್ದು ಇರುತ್ತದೆ. ಈ ಬಗ್ಗೆ ಶ್ರೀ ವಿನೋದ ದೊಡಮನಿ: ಪಿ.ಎಸ್.ಐ [ಕಾ. ಸೂ] ಸಾ; ತಾಳಿಕೋಟಿ ಪೊಲಿಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.06.2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಜಲನಗರ ಪೊಲೀಸ ಠಾಣೆ ಗುನ್ನಾ. ನಂ: 32/2021 ಕಲಂ 188. 269, 271 ಐಪಿಸಿ**

ದಿನಾಂಕ 08.06.2021 ರಂದು ಮದ್ಯಾಹ್ನ-12:00 ಗಂಟೆಯ ಸುಮಾರಿಗೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಬಸಯ್ಯ ತಂದೆ ಈರತಯ್ಯ ವಿಭೂತಿಮಠ, ವಯಾ-45 ವರ್ಷ, ಉದ್ಯೋಗ: ಹೊಟೇಲ ವ್ಯಾಪಾರ, ಜಾತಿ-ಹಿಂದೂ-ಜಂಗಮ ಸಾ॥ ಮನಗೂಳಿ ಹಾ.ವ:ಜಾಡರ ಓಣಿ, ಈತನು ವಿಜಯಪೂರ ಶಹರದ ಕೋಲಾರ ರೋಡಿಗೆ ಇರುವ ತನ್ನ ಕೋಲಾರ ಪಿಶ್ ಲ್ಯಾಂಡ ಹೊಟೇಲ ಪ್ರಾರಂಭಿಸಿ ಅನಾವಶ್ಯಕವಾಗಿ ಜನರಿಗೆ ಸೇರಿಸಿಕೊಂಡು ಊಟವನ್ನು ಪಾರ್ಸಲ್ ಕೊಡದೆ ಹೊಟೇಲದಲ್ಲಿಯೆ ಊಟಕ್ಕೆ ಕೊಟ್ಟು ವ್ಯಾಪಾರ ಮಾಡುತ್ತಿದ್ದಾಗ ಸಿಕ್ಕಿರುತ್ತಾನೆ. ಈ ಬಗ್ಗೆ [ಶ್ರೀ ರಫೀಕಅಹ್ಮದ ತಂದೆ ಮಹಿಬೂಬಸಾಬ ಬಳಗಾರ] ಕಿರಿಯ ಆರೋಗ್ಯ ನಿರೀಕ್ಷಕರು ಜಾತಿ-ಮುಸ್ಲಿಂ ಸಾ॥ ವಿಜಯಪುರ ಮಹಾನಗರ ಪಾಲಿಕೆ.ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08.06.2021 ರಂದು ಜಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಜಲನಗರ ಪೊಲೀಸ ಠಾಣೆ ಗುನ್ನಾ. ನಂ: 33/2021 ಕಲಂ 188. 269, 271 ಐಪಿಸಿ**

ದಿನಾಂಕ 08.06.2021 ರಂದು ಮದ್ಯಾಹ್ನ 03-00 ಗಂಟೆಯ ಸುಮಾರಿಗೆ ಇದರಲ್ಲಿ ಆರೋಪಿತರಾದ ನವೀನ ತಂದೆ ಅಶೋಕ ಗೋಪಶೆಟ್ಟಿ ವಯಾ-32 ವರ್ಷ, ಉದ್ಯೋಗ: ಕಿರಾಣಿ ಅಂಗಡಿ ವ್ಯಾಪಾರ, ಜಾತಿ-ಹಿಂದೂ-ಲಿಂಗಾಯತ ಸಾ॥ ಗಣೇಶ ನಗರ ವಿಜಯಪುರ ಕರ್ನಾಟಕ ರಾಜ್ಯ ಸರ್ಕಾರದ ಸಾಂಕ್ರಾಮಿಕ ರೋಗ ನಿರ್ವಹಣಾ ಕಾಯ್ದೇ ಆದೇಶವನ್ನು ಉಲ್ಲಂಘನೆ ಮಾಡಿರುವುದು ಸ್ಪಷ್ಟವಾಗಿ ತಿಳಿದು ಬಂದಿರುವುದರಿಂದ ಕಾರಣ ಈ ಕೆಳಗೆ ನಮೂದಿಸಿದ ಆರೋಪಿತನಾದ ಈತನು ಮಾನ್ಯ ರಾಜ್ಯ ಸರ್ಕಾರ ಆದೇಶವನ್ನು ಉಲ್ಲಂಘನೆ ಮಾಡಿ ದಿನಾಂಕ: 08/06/2021 ರಂದು ಮದ್ಯಾಹ್ನ 03-00 ಗಂಟೆಯ ಸುಮಾರಿಗೆ ವಿಜಯಪೂರ ಶಹರದ ಗಣೇಶ ನಗರದಲ್ಲಿ ಕಿರಾಣಿ ಅಂಗಡಿಯನ್ನು ಪ್ರಾರಂಭಿಸಿ ಅನಾವಶ್ಯಕವಾಗಿ ಜನರಿಗೆ ಸೇರಿಸಿಕೊಂಡು ಕಿರಾಣಿ ಸಾಮಾನುಗಳನ್ನು ವ್ಯಾಪಾರ ಮಾಡುತ್ತಿದ್ದಾಗ ಸಿಕ್ಕಿರುತ್ತಾನೆ.. ಈ ಬಗ್ಗೆ [ಶ್ರೀ ನಜೀರ ತಂದೆ ಲಾಲಸಾಬ ಮುಲ್ಲಾ ಕಿರಿಯ ಆರೋಗ್ಯ ನಿರೀಕ್ಷಕರು ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 08-06-2021 ರಂದು ಜಲನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.